SRI M. VEERAPPA MOILY (Minister for Finance and Co-operation). Sir, I beg to introduce the Karnataka Co-operative Societies (Amendment) Bill, 1980.

MR SPEAKER.—The Bill is introduced

KARNATAKA SALES TAX (AMENDMENT) BILL, 1980

LEAVE TO INTRODUCE

SRI M. VEERAPPA MOILY (Minister for Finance and Co-operation). Sir, I beg to move:

"That leave be granted to introduce the Karnataka Sales Tax (Amendment) Bill, 1980"

MR. SPEAKER.—The question is:

"That leave be granted to introduce the Karnataka Sale" Tax (Amendment) Bill, 1980"

The Motion was adopted and the leave was granted

SRI M. VEERAPPA MOILY (Minister for Finance and Co-operation) — Sir, I beg to introduce the Karnataka Sales Tax (Amendment) Bill, 1980.

MR SPEAKER.—The Bill is introduced.

MESSAGE

MR SPEAKER.— I have received a letter from the Governor of Karnataka. It reads as follows.

"In pursuance of Clause (3) of Article 207 of the Constitution of India, I, Govind Narain, the Governor of Karnataka do hereby recommend that the Karnataka Command Area Development Bill, 1980 be considered by the Karnataka Legislative Assembly.

BIILS FOR CONSIDERATION AND PASSING
THE KARNATAKA COMMAND AREA DEVELOPMENT BILL, 1980.

Motion to Consider

SRI M VEERAPPA MOILY (Minister for Finance and Co-operation). Sir, I beg to move.

"That the Karnataka Command Area Development Bill, 1980 be taken into consideration."

The question was proposed

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆ ಬಹಳ ಮಹತ್ವದ ಮಸೂದೆ. ತಾ: ೨೫–೧–೧೯೭೯ರಂದು ಈ ಒಂದು ಬಿಲ್ ಈ ಸದನದ ಮುಂದೆ ಬಂದಿತ್ತು. ಆದರೆ ಈ ಬಿಲ್‌ನ ಮೇಲೆ ಕೆಲವು ಸಮಯ ಚರ್ಚೆಯಾಗಿ ಅನಂತರ ಈ ಸದನ ಈ ಬಿಲ್ಲನ್ನು ಮುಂದುವರೆಸಿಕೊಂಡು ಹೋಯಿತು. ಆಮೇಲೆ ಇದಕ್ಕೆ ಸಂಬಂಧಪಟ್ಟಂತೆ ಒಂದು ಸುಗ್ರೀವಾಜ್ಞೆಯನ್ನು ತಾ: ೨೦–೮–೧೯೭೯ ರಲ್ಲಿ ತಂದು ಪುನಃ ಅದನ್ನು ರೀಪ್ಲೇಸ್ ಮಾಡುವುದಕ್ಕಾಗಿ ಒಂದು ಮಸೂದೆಯನ್ನು ತಾ: ೨೭–೯–೧೯೭೯ ರಂದು ಈ ಸದನದ ಮುಂದೆ ಮಂಡಿಸಲಾಯಿತು. ಈ ಸದನ ಅದನ್ನು ಮಂಜೂರು ಮಾಡಿದರೂ ಕೂಡ ವಿಧಾನಪರಿಷತ್ತಿನಲ್ಲಿ ಈ ಮಸೂದೆಯನ್ನು ಮಂಜೂರು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಪುನಃ ಒಂದು ಸುಗ್ರೀವಾಜ್ಞೆಯನ್ನು ಎರಡನೇ ಸಲ ಅಂದರೆ ತಾ: ೧೭–೧೧–೧೯೭೯ಕ್ಕೆ ತಂದು, ಅದನ್ನು ರೀಪ್ಲೇಸ್ ಮಾಡುವುದಕ್ಕಾಗಿ ಈ ಒಂದು ಮಸೂದೆಯನ್ನು ಈ ಸದನದ ಒಪ್ಪಿಗೆಗಾಗಿ ಇಡಲಾಗಿದೆ.

†ಶ್ರೀ ಕೆ.ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಿಳಿಸಿದಂತೆ ಈ ಹಿಂದೆ ಈ ಸದನದಲ್ಲಿ ಈ ವಿಧೇಯಕವನ್ನು ಮಂಜೂರಾತಿಗಾಗಿ ಈ ಸದನದ ಮುಂದೆ ಮಂಡಿಸಲಾಗಿತ್ತು. ಆ ಸಮಯದಲ್ಲಿ ಈ ವಿಧೇಯಕವನ್ನು ಮಂಡಿಸುವ ಒಂದು ಅವಕಾಶ ನನಗೆ ಸಿಕ್ಕಿತ್ತು. ಇಲ್ಲಿ ಇದಕ್ಕೆ ಈ ಮೊದಲೇ ಮಂಜೂರಾತಿ ಸಿಕ್ಕಿರುವ ಕಾರಣದಿಂದ ಈಗ ಮತ್ತೆ ಇದರ ಮೇಲೆ ಯಾವುದೇ ರೀತಿಯ ಟೀಕೆಟಿಪ್ಪಣಿಗಳನ್ನು ಮಾಡುವುದು ಅಗತ್ಯವೆಂದು ನಾನು ತಿಳಿದುಕೊಂಡಿಲ್ಲ. ಆದರೆ ಒಂದು ವಿಷಯವನ್ನು ಮಾನ್ಯ ಮಂತ್ರಿಗಳಿಗೆ ಹಾಗೂ ಸರ್ಕಾರಕ್ಕೆ ಸ್ಪಷ್ಟಪಡಿಸುವುದೇನೆಂದರೆ, ನಾವು ಈ ವಿಧೇಯಕವನ್ನು ಸಿದ್ಧಮಾಡಿದಂಥ ಕಾಲದಲ್ಲಿ ತ್ವರಿತವಾಗಿ ಈ ಕಮ್ಯಾಂಡ್ ಏರಿಯಾ ಡೆವೆಲಪ್‌ಮೆಂಟ್ ಅಥಾರಿಟಿಯನ್ನು ಒಂದು ಶಾಸನದತ್ತ ಸಂಸ್ಥೆಯನ್ನಾಗಿ ಮಾಡುವಂತಹ ಒಂದು ಅವಸರವಿದ್ದ ಕಾರಣದಿಂದ ಆ ಸಮಯದಲ್ಲಿ ಎಷ್ಟು ವಿಷಯಗಳನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಯಿತೋ ಅಷ್ಟನ್ನು ಅವಸರದಿಂದ ಪರಿಶೀಲನೆ ಮಾಡಿ ಈ ಒಂದು ವಿಧೇಯಕವನ್ನು ರೂಪಿಸಲಾಯಿತು. ನಂತರ ಇದನ್ನು ಈ ಸಭೆಯ ಮುಂದೆ ಮಂಡಿಸಿದಾಗ ವಿರೋಧಪಕ್ಷದ ಸದಸ್ಯರಿಗೆ ಹಾಗೂ ಆಡಳಿತ ಪಕ್ಷದ ಸದಸ್ಯರುಗಳಿಗೆ ನಾನು ಸ್ಪಷ್ಟಪಡಿಸಿದ್ದೆ, ಏನೆಂದರೆ, ಇದರಲ್ಲಿ ಮುಂದೆ ಯಾವುದೇ ರೀತಿಯ ನ್ಯೂನತೆಗಳು ಕಂಡು ಬಂದರೆ, ಅದನ್ನು ಸರಿಪಡಿಸುವಂತಹ ಜವಾಬ್ದಾರಿ ಸರ್ಕಾರದ ಮೇಲಿದೆ, ಸದಸ್ಯರಿಂದ ಬರುವಂತಹ ಎಲ್ಲ ವಿಷಯಗಳೂ ಕೂಲಂಕುಷವಾಗಿ ಪರಿಶೀಲನೆಯಾಗಿದೆ ಎಂದು ಅರ್ಥವಲ್ಲ, ಆದರೆ ಈ ಒಂದು ವಿಧೇಯಕಕ್ಕೆ ಬಹಳ ಅವಸರವಾಗಿ ಶಾಸನದತ್ತವಾದ ಒಂದು ಸ್ಥಾನವನ್ನು ಕಲ್ಪನೆ ಮಾಡದೆ ಹೋದರೆ, ಮುಂದೆ ಈ ಭೂಅಭಿವೃದ್ಧಿಗಾಗಿ ಬರಬೇಕಾದಂಥ ಹಣ ಬರದೆ ನಮ್ಮ ಅಭಿವೃದ್ಧಿ ಕಾರ್ಯ ಬಹಳ ಕುಂಠಿತವಾಗುವುದರಿಂದ ಇದು ಬಹಳ ಅತ್ಯಗತ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳಿದೆ. ಈ ಸರ್ಕಾರ ಪ್ರಾಯಶ: ಇದರ ಬಗ್ಗೆ ಇಲ್ಲಿ ಹೊಸದಾಗಿ ಏನನ್ನೂ ಆಲೋಚನೆ ಮಾಡಿದಂತೆ ನನಗೆ ಕಾಣುವುದಿಲ್ಲ.

೩–೩೦ ಪಿ.ಎಂ.

ಹಿಂದೆ ಇದ್ದಂಥ ವಿಧೇಯಕವನ್ನು ಯಥಾವತ್ತಾಗಿ ಈ ಸದನದ ಮುಂದೆ ಮಂಡಿಸಿದ್ದಾರೆ. ಆದರೆ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದು ಏನೆಂದರೆ, ಈ ಸರ್ಕಾರ ಇದರ ಬಗ್ಗೆ ಬಹಳ ಗಂಭೀರವಾಗಿ ಮತ್ತು ಹೊಸದಾಗಿ ಯೋಚನೆ ಮಾಡಬೇಕಾದ ಅಗತ್ಯವಿದೆ ಇದು ಕೇವಲ ನಾವು ಇವತ್ತು ಪಾಸ್ ಮಾಡಿ ಮರೆತುಬಿಡತಕ್ಕಂಥ ವಿಧೇಯಕ ಅಲ್ಲ. ಇವತ್ತು ಬೇಕಾದಷ್ಟು ನೀರಾವರಿ ವ್ಯವಸ್ಥೆಯಾಗಿದೆ, ನೀರನ್ನು ಹಿಡಿದಿಟ್ಟುಕೊಳ್ಳತಕ್ಕಂಥ ವ್ಯವಸ್ಥೆಯಾಗಿದ್ದರೂ ಕೂಡ ನೀರನ್ನು ಉಪಯೋಗಮಾಡತಕ್ಕಂಥಾದ್ದು ಮತ್ತು ಒಂದೊಂದು ಹನಿ ನೀರೂಕೂಡ ಪ್ರಾಮುಖ್ಯವಾದುದು ಎಂಬತಕ್ಕಂಥ ದೃಷ್ಟಿಕೋನವನ್ನು ಇಟ್ಟುಕೊಳ್ಳುವುದರ ಜೊತೆಗೆ ಒಂದೊಂದು ಇಂಚು ಭೂಮಿ ಕೂಡ ಪ್ರಾಮುಖ್ಯವಾದದು, ಭೂ ಅಭಿವೃದ್ಧಿ ಕೆಲಸ ಮಾಡಬೇಕು ಇದನ್ನು ಮಾಡುವುದಕ್ಕೆ ಜಟಿಲಸಮಸ್ಯೆಗಳಿವೆ ಕೇವಲ ಈ ವಿಧೇಯಕವನ್ನು ನಾವು ಒಂದು ರೀತಿಯಲ್ಲಿಚರ್ಚೆ ಇಲ್ಲದೇನೇ ಮಂಜೂರು ಮಾಡುವಂಥ ಒಂದು ಸನ್ನಿವೇಶ ಇದೆ. ಆದರೆ ಆ ಸನ್ನಿವೇಶದಿಂದಾಗಿ ಸರ್ಕಾರ ಇದರ ಹಿಂದೆ ಇರತಕ್ಕಂಥ ಉದ್ದೇಶವನ್ನು ಮರೆತುಬಿಡಬಾರದು ಎಂದು ಈ ಸಂದರ್ಭದಲ್ಲಿ ನಾನು ವಿನಯಪೂರ್ವಕವಾಗಿ ಸೂಚಿಸಲಿಕ್ಕೆ ಬಯಸುತ್ತೇನೆ. ಈ ವಿಧೇಯಕದ ಪ್ರಕಾರ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಇವುಗಳನ್ನು ರಚನೆಮಾಡಿ ಅದಕ್ಕೆ ಖಾಸಗಿ ಅಧ್ಯಕ್ಷರನ್ನೂ ಕೂಡ ನೇಮಕಮಾಡಬೇಕೆಂದು ಇದೆ. ಹೊಸ ಸರ್ಕಾರ ಬಂದಮೇಲೆ ಹಿಂದೆ ಇದ್ದವರನ್ನು ತೆಗೆದುಹಾಕಿ

ಅದಕ್ಕೆ ಅಧಿಕಾರಿಗಳನ್ನು ನೇಮಕಮಾಡಿದ್ದೀರಿ ಸಂತೋಷ, ನಿಮ್ಮ ಸರ್ಕಾರ ಇದೆ, ನಿಮಗೆ ಬೇಕಾದವರನ್ನು ನೇಮಕಮಾಡಬೇಕು ಎಂಬ ಅಭಿಲಾಷೆಯಿಂದ ಮಾಡಿದ್ದೀರಿ ಅದು ದೊಡ್ಡ ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಇದರ ಬಗ್ಗೆ ವಿಚಾರಮಾಡಬೇಕು. ಯಾರಿಗೆ ಕಾರ್ಯನಿರ್ವಹಣೆಮಾಡುವುದಕ್ಕೆ ಶಕ್ತಿ ಇದೆ ಅಂಥವರನ್ನು ನೇಮಕಮಾಡಬೇಕು. ಶ್ರೀಮಾನ್ ಜೆ. ಎಚ್. ಪಟೇಲರು ಇದ್ದರು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಆಡಳಿತದಲ್ಲಿ ಸ್ವಲ್ಪಮಟ್ಟಿಗೆ ಪಾಲು ಇದ್ದರೆ ಒಳ್ಳೆಯದು. ವಿರೋಧಪಕ್ಷದಲ್ಲಿ ರುವವರಿಗೂ ಇದ್ದರೆ ಒಳ್ಳೆಯದು. ಕೇವಲ ಒಂದು ಕಡೆಯವರೇ ಇರಬೇಕಾದ ಅಗತ್ಯ ಇರಲಿಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯಗಳನ್ನು ನೋಡಿದರೆ ಯಾವುದೇ ಸರ್ಕಾರ ಬಂದ ಮೇಲೆ ತನಗೆ ಬೇಕಾದವರನ್ನೆಲ್ಲಾ ಹಾಕಿ, ಚೆನ್ನಾಗಿ ಕೆಲಸಮಾಡುತ್ತಾ ಇರತಕ್ಕಂಥಾವರನ್ನು ಕಿತ್ತು ಹಾಕಬೇಕು ಎಂದು ತಿಳಿದುಕೊಂಡಿರುವುದರಿಂದ ನಾನು ಕೇವಲ ಈ ಸರ್ಕಾರವನ್ನು ಮಾತ್ರ ದೂಷಣೆ ಮಾಡುವುದಕ್ಕೆ ತಯಾರಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಕೆಲವೇ ಕೆಲವು ಅಧಿಕಾರಿಗಳ ಕೈಯಲ್ಲಿ ಕೊಟ್ಟರೆ ಯಾವ ಒಂದು ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೀರಿ ಅದರ ಪ್ರಯೋಜನವಾಗುವುದಿಲ್ಲ. ಈ ವಿಧೇಯಕಕ್ಕೆ ಸಂಬಂಧಪಟ್ಟಿರತಕ್ಕಂಥ ಆಚ್ಚುಕಟ್ಟು ಪ್ರದೇಶದಲ್ಲಿ ಸಮರ್ಥರೀತಿಯಲ್ಲಿ ಕೆಲಸಮಾಡುವಂಥ ಎಲ್ಲಾ ಸಾಮರ್ಥ್ಯವನ್ನು ಈ ವಿಧೇಯಕದ ಮೂಲಕವಾಗಿ ಆಚ್ಚುಕಟ್ಟು ಪ್ರಾಧಿಕಾರಕ್ಕೆ ನಾವು ಒದಗಿಸಿದ್ದೇವೆ, ಈ ರೀತಿ ಒದಗಿಸಿರಬೇಕಾದರೆ ಅದನ್ನು ನಿರ್ವಹಿಸುವುದಕ್ಕೆ ಸಾಮರ್ಥ್ಯವಿರತಕ್ಕಂಥಾವರನ್ನು ಗುರುತಿಸಿ ಅವರ ಕೈಯಲ್ಲಿ ಇದರ ಜವಾಬ್ದಾರಿಯನ್ನು ಕೊಡದೆ ಈಗಾಗಲೇ ಸಾಕಷ್ಟು ಹೊರೆ ಇರತಕ್ಕಂಥಾ ಡೆಪ್ಯುಟಿ ಕಮಿಷನರ್ ಮತ್ತು ಡಿವಿಜನಲ್ ಕಮಿಷನರ್‌ರವರಿಗೆ ಕೊಟ್ಟಿದ್ದೀರಿ. ಅವರುಗಳಿಗೆ ಈಗಾಗಲೇ ಸಾಕಷ್ಟು ಹೆಚ್ಚು ಕೆಲಸಗಳ ಜವಾಬ್ದಾರಿ ಇದೆ. ಅದರ ಜೊತೆಗೆ ಈ ಪ್ರಾಧಿಕಾರದ ಕೆಲಸವನ್ನೂ ಮಾಡಬೇಕು ಅಂದರೆ, ಏನೋ ಒಂದು ರೀತಿ ಮಾಡುತ್ತಾರೆ, ಬೇಕು ಬೇಡದ ರೀತಿ ಬರೆದಿಟ್ಟು ಬಿಡುತ್ತಾರೆ. ಯಾವ ಒಂದು ಉದ್ದೇಶವನ್ನಿಟುಕೊಂಡು ಆಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ರಚನೆಮಾಡಿದ್ದೇವೋ ಈರೀತಿಯಾದರೆ ಅದು ಸಾರ್ಥಕವಾಗುವುದಿಲ್ಲ. ನಾನು ಸರ್ಕಾರವನ್ನು ಪ್ರಶ್ನೆ ಮಾಡುವುದೇನೆಂದರೆ, ತಮಗೆ ಆಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡತಕ್ಕತಕ್ಕಂಥ ಪೊಲಿಟಿಕಲ್ ವಿಲ್ ಅನ್ನು ದಯವಿಟ್ಟು ತೋರಿಸಬೇಕು. ಈಗ ತೊಂದರೆ ಏನಾಗಿದೆ ಯೆಂದರೆ, ಪ್ರಜಾಪ್ರಭುತ್ವದಲ್ಲಿ ಮೆಜಾರಿಟಿ ಕಡಿಮೆ ಇದ್ದರೆ ತೊಂದರೆಯಾಗುವುದಿಲ್ಲ, ಮೆಜಾರಿಟಿ ಜಾಸ್ತಿಯಾಗಿ ತೊಂದರೆಯಾಗುತ್ತದೆ. ಈಗಿರತಕ್ಕಂಥ ಬಹುಮಂತ ಜಾಸ್ತಿಯಾಗಿರುವುದರಿಂದ ತೊಂದರೆ ಬಹಳ ಇದೆ. ಒಂದು ಸ್ಥಾನ ಕೊಡಬೇಕು ಅಂದರೆ, ಇದ್ದವರೆಲ್ಲಾ ಅದೇ ಸ್ಥಾನ ಕೇಳುವುದರಿಂದ ತೀರ್ಮಾನ ವಾಗುವುದಿಲ್ಲ. ಆಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಸ್ಥಾನ ಬಹಳ ಪ್ರಾಮುಖ್ಯವಾದುದು. ಇದಕ್ಕೆ ತೀವ್ರವಾದಂಥ ಪೈಪೋಟಿ ಇದೆ. ಈ ಸರ್ಕಾರವೇ ತೀರ್ಮಾನಮಾಡಿ ನೇಮಕಮಾಡಿದರೆ ಸರಿ ಇಲ್ಲದೇ ಹೋದರೆ ಡೆಲ್ಲಿಗೆ ಹೋಗತಕ್ಕಂಥ ಪ್ರಸಂಗ ಇದೆ. ಏಕೆಂದರೆ, ಇತ್ತೀಚೆಗೆ ಎಲ್ಲಾದಕ್ಕೂ ಡೆಲ್ಲಿಗೆ ಹೋಗತಕ್ಕಂಥ ಬೆಳವಣಿಗೆಯನ್ನು ನಿರೀಕ್ಷಣೆ ಮಾಡಬೇಕಾಗಿದೆ. ಎಲ್ಲಾ ವಿಷಯಗಳೂ ಡೆಲ್ಲಿಯಲ್ಲಿ ತೀರ್ಮಾನವಾಗಬೇಕು, ನಮ್ಮ ನಮ್ಮ ವಿಷಯಗಳು ಡೆಲ್ಲಿಯಲ್ಲಿ ಬಗೆಹರಿಯಬೇಕು, ಇನ್ನೂ ತಕ್ಕಮಟ್ಟಿಗೆ ಅಧಿಕಾರ ವಿಕೇಂದ್ರೀಕರಣವಾಗಬೇಕು ಎನ್ನತಕ್ಕಂಥ ಅಭಿಪ್ರಾಯ ಇತ್ತೀಚೆಗೆ ಹೆಚ್ಚಾಗಿ ಕಂಡುಬರುತ್ತಿದೆ. ಎಲ್ಲಾ ವಿಷಯಗಳಲ್ಲೂ ತಿರುಗುಮುರುಗು ಆಗಿ ಬೋರ್ಡ್‌ಗಳು, ಕಾರ್ಪೊರೇಷನ್‌ಗಳು ಮುಂತಾದುವುಗಳ ಪ್ರತಿಯೊಂದು ನೇಮಕಾತಿಯಲ್ಲೂ ಕೂಡ ಡೆಲ್ಲಿಯಲ್ಲಿ ಮಂಜೂರು ಆಗಬೇಕಾದಂಥ ಪರಿಸ್ಥಿತಿ ಇದೆಯೆಂದು ತಿಳಿದುಬಂದಿದೆ. ಇದು ಸುಳ್ಳಾದರೆ ಬಹಳ ಸಂತೋಷ, ಸತ್ಯವಾದರೆ, ಯಾವುದೇ ಆತಂಕ ವಿಲ್ಲದೆ ಅವರು ಕೆಲಸ ನಿರ್ವಹಿಸುವುದರಲ್ಲಿ ಬಹಳ ತೊಡಕು ಉಂಟಾಗುತ್ತದೆ. ವಿಳಂಬವಾಗುತ್ತದೆ. ಈ ರೀತಿ ವಿಳಂಬವಾಗಿ ವರ್ಷಾನುಗಟ್ಟಲೆ ಅಧಿಕಾರಿಗಳು ಮಂಡಲಿಗಳ ಅಧ್ಯಕ್ಷರಾಗಿರುವುದಾದರೆ ಈ ವಿಧೇಯಕಕ್ಕೂ ಯಾವ ಸಾರ್ಥಕತ್ವ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ವಿಧೇಯಕದಿಂದ ಬರುವಂಥ ಅಧಿಕಾರವನ್ನು ಉಪಯೋಗಿಸಿ ಆಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರಕ್ಕೆ ಯೋಗ್ಯರಾದಂಥ ಜನರನ್ನು ನೇಮಕಮಾಡಿ ತಕ್ಷಣ ಕಾರ್ಯಪ್ರವೃತ್ತಿಯಾಗುವಂತೆ ಮಾಡ ಬೇಕು. ರಾಜ್ಯದಲ್ಲಿರತಕ್ಕ ಒಂದೊಂದು ಇಂಚು ಆಚ್ಚುಕಟ್ಟು ನೆಲವೂ ಅಭಿವೃದ್ಧಿಯಾಗುವುದಕ್ಕೆ ಪ್ರಯತ್ನಮಾಡುತ್ತಾರೆ, ನೀರಾವರಿ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ಒಂದೊಂದು ಹನಿ

ನೀರೂ ಕೂಡ ಸಮರ್ಪಕವಾಗಿ ಉಪಯೋಗವಾಗುವಂತೆ ಸರ್ಕಾರ ತುರ್ತಾಗಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎಂದು ಹೃತ್ಪೂರ್ವಕವಾಗಿ ಆಶಿಸಿ, ಈ ವಿಧೇಯಕಕ್ಕೆ ಸಂಪೂರ್ಣವಾದಂಥ ಬೆಂಬಲವನ್ನು ಸೂಚನೆ ಮಾಡುತ್ತೇನೆ.

(ಶ್ರೀ ಎಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

MR. CHAIRMAN.—Now the Hon'ble Minister for Finance will reply. If there is anybody who is inclined to speak, I will permit,

ಶ್ರೀ ಎಂ. ವೀರಪ್ಪ ಮೊಯಿಲಿ (ಹಣಕಾಸಿನ ಹಾಗೂ ಸಹಕಾರ ಮಂತ್ರಿಗಳು) –ಮಾನ್ಯ ಅಧ್ಯಕ್ಷರೇ, ಈ ಮಸೂದೆ ಬಗ್ಗೆ ದೀರ್ಘವಾದ ಚರ್ಚೆಯಾಗುವುದಾದರೆ ಆಗಲಿ. ಏಕೆಂದರೆ, ಈ ಮಸೂದೆ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆಯಾಗಿ, ಪುನಃ ವಿಮರ್ಶೆಮಾಡಿ ಇದರಲ್ಲಿದ್ದಂಥ ಎಲ್ಲಾ ಲೋಪದೋಷಗಳನ್ನು ತೆಗೆದು ಈ ಮಸೂದೆಯನ್ನು ಈಗ ಸದನದ ಮುಂದೆ ತಂದಿದ್ದಾಗಿದೆ.

MR. CHAIRMAN. - Sri Gangadhar will be the last person to speak now because the hon. Minister has said that the Bill has been discussed thread bare.

SRI C. M. ARUMUGHAM.—Why not others? We want to discuss.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಈ ವಿಧೇಯಕದ ಬಗ್ಗೆ ಹಿಂದೆ ಸಾಕಷ್ಟು ಚರ್ಚೆಯಾಗಿದೆ. ಆದರೆ ಇದರಲ್ಲಿ ಮುಖ್ಯವಾಗಿ, ಬೋರ್ಡ್‌ಗಳನ್ನು ಮಾಡಿ ಹೊಸದಾಗಿ ಅಧ್ಯಕ್ಷರನ್ನು ನೇಮಕಮಾಡಿರುವುದರಿಂದ ನಿರೀಕ್ಷಿಸಿದಂಥ ಕೆಲಸವಾಗುತ್ತದೆಯೇ ಎಂಬ ಬಗ್ಗೆ ಈಗತಾನೇ ಶ್ರೀಮಾನ್ ಶ್ರೀನಿವಾಸ್ ಅವರು ಮಾತನಾಡಿದ್ದಾರೆ. ಇದರಲ್ಲಿ ನೋಡಿದರೆ ಅನೇಕ ಬೋರ್ಡ್‌ಗಳನ್ನು ಮಾಡಿ ಕೆಲವು ಪೊಲಿಟಿಕಲಿ ಡಿಪೆಸ್ಡ್ ಜನರಿಗಾಗಿ ರಿಹ್ಯಾಬಿಲಿಟೇಷನ್ ಪ್ರಾರಂಭವಾದಹಾಗೆ ಕಾಣುತ್ತದೆ. ಯಾರಿಗೆ ಆದರ ಅನುಭವ ಇರುವುದಿಲ್ಲಿ, ಜಮೀನನ್ನು ವ್ಯವಸ್ಥೆಗೊಳಿಸತಕ್ಕಂಥ ಅನುಭವ ಇರುವುದಿಲ್ಲ, ಅಂತಹ ಜನರನ್ನು ಅಧ್ಯಕ್ಷರನ್ನಾಗಿ ಮಾಡಿ ಕೂಡಿಸುವುದರಿಂದ ನಿಜವಾಗಿಯೂ ಈ ಮಸೂದೆಯ ಉದ್ದೇಶ ಸಾರ್ಥಕವಾಗುತ್ತದೆಯೇ ಎನ್ನುವುದನ್ನು ಆಲೋಚನೆ ಮಾಡಬೇಕಾದಂಥ ಅಂಶ. ಕ್ರಾಪ್ ಪ್ಯಾಟ್ರನ್ ಆಗಲೀ, ನೀರಿನ ವ್ಯವಸ್ಥೆ ಮಾಡತಕ್ಕಂಥಾದ್ದಾಗಲೀ ಇದರ ಬಗ್ಗೆ ಸಾಕಷ್ಟು ಅನುಭವವಿರತಕ್ಕಂಥಾವರನ್ನು ನೇಮಕಮಾಡಿದರೆ ಇದರ ಅಭಿವೃದ್ಧಿಯಾಗುತ್ತದೆ. ಮತ್ತು ಸಾರ್ಥಕವಾಗುತ್ತದೆಯೇ ವಿನಃ ಯಾರಿಗೋ ಫೇವರ್ ಮಾಡಬೇಕು ಎನ್ನುವ ಉದ್ದೇಶಕ್ಕೊಸ್ಕರವಾಗಿ ಅವರಿಗೊಸ್ಕರವಾಗಿ ಬೋರ್ಡ್‌ಗಳನ್ನು ಮಾಡಂತ್ತಾ ಇದ್ದೀರಿ ಎಂದು ನಮಗೆ ತಿಳಿದುಬರುತ್ತದೆ. ಈರೀತಿ ಮಾಡುವುದನ್ನು ವಸ್ತುತಃ ಕೈಬಿಡದೇ ಹೋದರೆ ಈ ಶಾಸನಗಳನ್ನು ಏನುಮಾಡುತ್ತಾ ಇದ್ದೀರಿ ಇದರ ಉದ್ದೇಶ ಸಫಲವಾಗುವುದಿಲ್ಲ. ನಮ್ಮಲ್ಲಿ ಇನ್ನೊಂದು ಪ್ರವೃತ್ತಿ ಬೆಳೆದು ಬಂದಿದೆ, ೧೯೪೭ನೇ ಇಸವಿ ಹಿಂದೆ ಯಾವುದೋ ಶಾಸನ ಮಾಡಿದ್ದರೆ ಅದನ್ನೇ ಇಟ್ಟುಕೊಂಡು ಬರುತ್ತಾ ಇದ್ದೇವೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚಿತವಾಗಿ,

> "No suit, prosecution or other proceeding shall lie against any officer or servant of the State Government for any act done or purported to be done under this Act without the previous sanction of the State Government"... etc...

ಎಂದು ಇತ್ತು.

ಆ ಶಾಸನ ಸ್ವತಂತ್ರ ರಾಷ್ಟ್ರದಲ್ಲಿ ಇನ್ನು ಉಳಿದುಕೊಳ್ಳಬೇಕೇ ? ಇವತ್ತು ನಾವು ಎಲ್ಲಾ ಅಧಿಕಾರವನ್ನು ಅಧಿಕಾರ ಶಾಹಿಯವರಿಗೇ ಕೊಡುತ್ತಾ ಬಂದರೆ ನಿಜವಾಗಿಯೂ ಸಾರ್ವಜನಿಕರಾದ ನಮಗೆ ಇರತಕ್ಕ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳುವುದು ಎಲ್ಲಿ ? ಒಬ್ಬ ಅಧಿಕಾರಿ ತಪ್ಪು ಮಾಡಿದರೆ ಮೇಲಾಧಿಕಾರಿಗೆ ಹೋಗುತ್ತದೆ, ನ್ಯಾಯ ದೊರಕುತ್ತದೆ ಎನ್ನುವ ಭರವಸೆಯೇ ಇಲ್ಲದ ಹಾಗೆ ಆಗಿದೆ. ಇವತ್ತಿನ ದಿವಸ ನಾವು ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ನೋಡುವುದಾದರೆ, ಅಲ್ಲಿ ತಹಶೀಲ್ದಾರ್, ತಹಶೀಲ್ದಾರ್ ಮೇಲೆ ಅಸಿಸ್ಟೆಂಟ್ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ರವರ ಮೇಲೆ ಡೆಪ್ಯುಟಿ

ಕಮೀಷನರ್ ಅವರ ಮೇಲೆ ಡಿವಿಜನಲ್ ಕಮಿಷನರ್. ಕಮೀಷನ್ ಹೀಗೆ ಹೋಗುತ್ತದೆ. ೨೦ ವರ್ಷ ಗಳಾದರೂ ನ್ಯಾಯ ದೊರಕು ವುದಿಲ್ಲ. ಈ ತರಹ ವಿವಿಧ ರೂಪಗಳಲ್ಲಿ ೧೦ ವರ್ಷಕ್ಕೂ ಮೇಲ್ಪಟ್ಟ ಕೇಸು ಗಳು ಇತ್ಯರ್ಥವಾಗದೇ ಉಳಿದಿರುವಂಥ ಸಂದರ್ಭಗಳನ್ನು ನಾವು ನೋಡಬಹುದಾಗಿದೆ. ಇವತ್ತು ಒಬ್ಬ ಅಧಿಕಾರಿ ತಪ್ಪು ಮಾಡಿದರೆ ಅನ್ಯಾಯಕ್ಕೊಳಗಾದ ವ್ಯಕ್ತಿ ಕೋರ್ಟಿಗೆ ಹೋಗಿ ನ್ಯಾಯ ದೊರಕಿಸಿ ಕೊಳ್ಳು ವುದಕ್ಕೆ ತಾವು ವ್ಯವಸ್ಥೆ ಮಾಡಿಲ್ಲ ಇವತ್ತು ಅಧಿಕಾರಿಗಳು ಏನಾದರೂ ತಪ್ಪು ಮಾಡಿದರೆ ಅದನ್ನು ಕೋರ್ಟಿಗೆ ಹೋಗಿ ವಿಚಾರಣೆ ಮಾಡಲು ಅವಕಾಶವಿಲ್ಲದ ಹಾಗೆ ಮಾಡಿದ್ದೀರಿ ಇವತ್ತು ಏನಾದರೂ ಅಧಿಕಾರಿಗಳು ತಪ್ಪು ಮಾಡಿದರೆ ಏನಾದರೂ ಲೋಪ ದೋಷಗಳನ್ನು ಮಾಡಿದರೆ ಅವರಿಗೇ ಪ್ರೊಟೆಕ್ಷನ್ ಕೊಟ್ಟಿದ್ದೀರಿ. ಇದರಿಂದಾಗಿ ಈ ಸೆಕ್ಷೆನ್ ೪೩. ಅವರು ಏನೇ ತಪ್ಪು ಮಾಡಿದರೂ ಕೂಡ ಮಾಫಿ ಲೈಸನ್ಸ್ ಕೊಟ್ಟಹಾಗೆ ಇದೆ: ಆದುದರಿಂದ ಈ ಸೆಕ್ಷೆನ್‌ನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕು. ಯಾವನು ಅಧಿಕಾರಿಯೊಬ್ಬನಿಂದ ತೊಂದರೆಗೊಳಗಾಗಿರುತ್ತಾನೋ ಅವನು ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿಲ್ಲದ ಹಾಗೆ ಮಾಡಿದ್ದೀರಿ, ಇದರಿಂದ ತಾವು ಅಧಿಕಾರ ಶಾಹಿ ರಾಜ್ಯವನ್ನಾಗಿ ಸ್ಥಾಪನೆ ಮಾಡು ತ್ತಿದ್ದೀರಿಯೇ ಹೊರತು ನಿಜವಾಗಿಯೂ ಪ್ರಜಾಪ್ರಭುತ್ವ ರಾಜ್ಯವನ್ನಾಗಿ ಮಾಡುತ್ತಿಲ್ಲ. ಇದರಿಂದಾಗಿ ಪ್ರಜಾಪ್ರಭುತ್ವ ರೀತಿಯಲ್ಲಿ ಅವರು ಸಹ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ದೃಷ್ಟಿಯಿಂದ ಇವತ್ತು ಅಧಿಕಾರಿಗಳ ಮೇಲೆ ಅಂಕುಶ ಇರಬೇಕಾದರೆ, ತಪ್ಪು ಮಾಡಿದಂಥ ಅಧಿಕಾರಿಗಳು ನ್ಯಾಯಾಲಯ ದಲ್ಲಿ ನಿಂತು ಕೊಳ್ಳಬೇಕು, ಅನ್ಯಾಯಕ್ಕೆ ಒಳಗಾದವರು ನ್ಯಾಯಾಲಯದಲ್ಲಿ ರಕ್ಷಣೆ ದೊರಕಿಸಿ ಕೊಳ್ಳುವು ದಕ್ಕೆ ಅವಕಾಶವಿರಬೇಕು. ಆದುದರಿಂದ ತಾವು ಮೊದಲು ಸೆಕ್ಷನ್ ೪೩ನ್ನು ಸಂಪೂರ್ಣವಾಗಿ ತೆಗೆದುಹಾಕ ಬೇಕು, ತೆಗೆದುಹಾಕಿದರೆ ಮಾತ್ರ ಈ ಬಿಲ್ಲಿಗೆ ನನ್ನ ಸಂಪೂರ್ಣ ಬೆಂಬಲವಿದೆ. ಇದನ್ನು ತಾವು ತೆಗೆದು ಹಾಕದಿದ್ದರೆ ಅಧಿಕಾರಿಗಳು ತಪ್ಪು ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಆದು ದರಿಂದ ದಯಮಾಡಿ ಈ ಸೆಕ್ಷನ್ ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಕೇಳಿಕೊಂಡು, ಅಧಿಕಾರ ಶಾಹಿ ಪ್ರವೃತ್ತಿ ಬೆಳೆಯದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ಮತ್ತೆ ತಾವು ಈ ಬಿಲ್ಲಿನ ಉದ್ದೇಶ ಸಾಧನೆಗಾಗಿ ತಜ್ಞರನ್ನೇ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುತ್ತೇವೆ ಎನ್ನುತಕ್ಕ ಭರವಸೆ ಕೊಡುತ್ತಿರು ವುದರಿಂದ ಇದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೆನೆ.

ಶ್ರೀ ಜಿ. ಕೆ. ತೆಕೇಡ್ (ಪರಸಗಡ).—ಸನ್ಮಾನ್ಯ ಅಧ್ಯಕ್ಷರೇ, ಈ ಕಮಾಂಡ್ ಏರಿಯಾ ಡೆವಲಪ್ ಮೆಂಟ್ ಆ್ಯಕ್ಟ್ ಏನಿದೆ ಇದು ಉತ್ಕೃಷ್ಟವಾದಂಥ ಬಿಲ್ ಮಲಪ್ರಭಾ ಘಟಪ್ರಭ ತುಂಗಭದ್ರಾ, ಕಾವೇರಿ ಹಾಗೂ ೫ ವಿಭಾಗಗಳನ್ನು ಇದರಲ್ಲಿ ತಂದು ಈ ಭಾಗದ ನೀರಾವರಿ ಕ್ಷೇತ್ರವನ್ನು ಸರಿಯಾದ ರೀತಿ ಯಲ್ಲಿ ಆಯಾಯ್ಕ ಭಾಗದ ಜನತೆಯ ಬೇಡಿಕೆಗಳಿಗೆ ಅನುಸಾರವಾಗಿ ಒಂದು ಪ್ರಗತಿಪರವಾದ ದೃಷ್ಟಿಯಂ ನ್ನಿಟ್ಟುಕೊಂಡು ಬೆಳವಣಿಗೆಯನ್ನು ಮಾಡುವಂಥಾ ಒಂದು ಅವಕಾಶ ಈ ಬಿಲ್ಲಿನಲ್ಲಿ ಇದೆ. ತುಂಗಭದ್ರಾ ಪ್ರಾಜೆಕ್ಟ್ ಮಲಪಭಾ, ಘಟಪ್ರಭಾ, ಕಾವೇರಿ ಬೇಸಿನ್, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್, ಭದ್ರಾ ಪ್ರಾಜೆಕ್ಟ್ ಈ ಕ್ಷೇತ್ರಗಳಲ್ಲಿ ನಮ್ಮ ರಾಜ್ಯದ ಬಹುಭಾಗದ ಪ್ರದೇಶಗಳಿಗೆ ಅನುಕೂಲವಾಗಲು, ನಾವು ಈಗಾಗಲೇ ಸಾವಿ ರಾರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆಣೆಕಟ್ಟುಗಳನ್ನು ಕಟ್ಟಿಸಿ, ಅಲ್ಲಿ ನಿಂತ ನೀರಿನಿಂದ ರೈತರಿಗೆ ಕಾಲುವೆಗಳ ಮುಖಾಂತರ ನೀರನ್ನು ಕೊಡುತ್ತಿದ್ದೇವೆ. ಆದರೆ ಇವತ್ತು ಸರಿಯಾದ ರೀತಿಯಲ್ಲಿ ಕಾಲುವೆ ಗಳನ್ನು ಉಪಯೋಗ ಮಾಡಿಕೊಳ್ಳುವಂಥಾ ಪರಿಸ್ಥಿತಿಯಲ್ಲಿ ರೈತರು ಇಲ್ಲ. ಮಲಪ್ರಭಾ ಯೋಜನೆಯಿಂದ ಇವತ್ತು ನನ್ನ ಕ್ಷೇತ್ರದಲ್ಲಿ ೬೦ ಪರ್ಸೆಂಟ್‌ನಷ್ಟು ನೀರಾವರಿ ಕ್ಷೇತ್ರವಾಗಿದೆ, ಆದರೆ ನಾವು ಎಲ್ಲೆಲ್ಲಿ ಈ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದೆವೋ ಅಲ್ಲೆಲ್ಲಾ ಕಾಲುವೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳ ಬೇಕಾಗಿದೆ ಕಾಲುವೆಗಳನ್ನು ಸರಿಯಾದ ರೀತಿಯಲ್ಲಿ ಇಡಬೇಕಾಗಿರುತ್ತದೆ. ಇವತ್ತು ನಾವು ಕಾಲುವೆ ಗಳನ್ನು ಸರಿಯಾದ ರೀತಿಯಲ್ಲಿ ಇಡಬೇಕಾಗಿರುತ್ತದೆ ಇವತ್ತು ನಾವು ಕಾಲುವೆಗಳನ್ನು ಸರಿಯಾದ ದುರ ಸ್ತಿಯಲ್ಲಿಡದೇ ಇರುವುದರಿಂದ ಕಾಲುವೆಯ ಕೊನೆ ಭಾಗದಲ್ಲಿರತಕ್ಕಂಥ ರೈತರಿಗೆ ನೀರು ದೊರೆಯದಂಥ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ತಾವು ಇವತ್ತು ಕಮಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಬಿಲ್‌ನ್ನು ತಂದು ಅದರಲ್ಲಿ ತಜ್ಞರನ್ನೇ ಅಧ್ಯಕ್ಷರನ್ನಾಗಿ ಹಾಕುವುದರಿಂದ ಅವರ ಮೆಲ್ವಿಚಾರಣೆಯಲ್ಲಿ ಇದೆಲ್ಲಾ ಸರಿಹೋಗಬಹುದು. ಇವತ್ತು ಇಂಜಿನಿಯರ್‌ರವರು, ಮುಖ್ಯ ಇಂಜಿನಿಯರ್‌ರವರು, ಸೂಪರಿಂಟೆಂಡೆಂಟ್, ಎಗ್ಜಿಕ್ಯುಟಿವ್ ಇಂಜಿನಿಯರ್‌ರವರು ಅಸಿಸ್ಟೆಂಟ್ ಇಂಜಿನಿಯರ್‌ರವರು ಯಾರೂ ಕಾಲುವೆಗಳನ್ನು ಸರಿಯಾದ ಸ್ಥಿತಿಯಲ್ಲಿ ಇದೆಯೋ ಇಲ್ಲವೋ ಎಂಬುದನ್ನು ನೋಡುವುದಕ್ಕೇ ಹೋಗುತ್ತಿಲ್ಲ. ಆದರೆ ತಾವು ಹೊಸದಾಗಿ ಈ ಬಿಲ್‌ನ್ನು ತರುವುದರಿಂದ ಅವರ ಕೈಕೆಳಗಿನ

ಸಿಬ್ಬಂದಿಯವರುಗಳ ಮೇಲೆ ಜವಾಬ್ದಾರಿ ಬೀಳುವುದರಿಂದ ಅವರು ಕಾಲುವೆಗಳ ದುರಸ್ತಿ ಕಾರ್ಯವನ್ನು ಬೇಗನೆ ಕೈಗೊಳ್ಳುವುದಕ್ಕೆ ಸಹಾಯಕವಾಗುತ್ತದೆ. ಮತ್ತು ರಸ್ತೆಗಳ ನಿರ್ಮಾಣ ಬಹಳ ಅವಶ್ಯಕವಿದೆ, ಈ ರಸ್ತೆಗಳ ನಿರ್ಮಾಣವಾಗದಿದ್ದರೆ ರೈತ ತಾನು ಬೆಳೆದಂಥ ಬೆಳೆಯನ್ನು ಮಾರ್ಕೆಟ್ಟಿಗೆ ಸಾಗಿಸುವಂಥಾ ಪರಿಸ್ಥಿತಿಯಲ್ಲಿ ಇರುವುದಿಲ್ಲ, ಬಹಳ ಕಷ್ಟದಾಯಕವಾಗಿದೆ. ಇವತ್ತು ನನ್ನ ಭಾಗದಲ್ಲಿರುವ ರಸ್ತೆಗಳ ಬಗ್ಗೆ ಹೇಳುವುದಾದರೆ, ಸವದತ್ತಿ ಇಂದ ಜೆಂಕಾರ್‌ನ ರಸ್ತೆಯಲ್ಲಿ ನೀರನ್ನು ಬಿಟ್ಟು ಬಿಟ್ಟಿದ್ದಾರೆ. ಇದರಿಂದ ರೈತರಿಗೆ ತುಂಬಾ ಕಷ್ಟವಾಗಿರುವುದರಿಂದ ನಾವು ಪದೇ ಪದೇ ಮುಖ್ಯ ಇಂಜಿನಿಯರ್ ರವರಿಗೇ, ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರಿಗೆ ತಿಳಿಸಿದಾಗ್ಯೂ ಸಹ ಅವರು ನಮಗೆ ಕೇಂದ್ರ ಸರ್ಕಾರದಿಂದ ಹಣಸಹಾಯ ಬಂದಿಲ್ಲ ಬಂದಮೇಲೆ ಮಾಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಆದುದರಿಂದ ತಾವು ಕೇಂದ್ರ ಸರ್ಕಾರದವರಿಂದ ಸಾಕಷ್ಟು ಹಣ ಸಹಾಯವನ್ನು ಪಡೆದು ಈ ಕಮ್ಯಾಂಡ್ ಏರಿಯಾ ಡೆವಲಪ್ ಮೆಂಟ್ ನಿಂದ ಆಯಾಯಾ ಕ್ಷೇತ್ರದಲ್ಲಿಗೆ ಮುಖ್ಯವಾಗಿ ರಸ್ತೆಗಳ ನಿರ್ಮಾಣದ ಕಾರ್ಯ ಮತ್ತು ಯಾವ್ಯಾವ ಭೂಮಿಯಲ್ಲಿ ಯಾವ್ಯಾವ ಬೆಳೆಗಳನ್ನು ಬೆಳೆದರೆ ಉತ್ತಮವೆನ್ನುವುದಕ್ಕೆ ಮಣ್ಣಿನ ಪರೀಕ್ಷೆ ಮಾಡಿಸಿ ರೈತರಿಗೆ ಮಾರ್ಗದರ್ಶನ ನೀಡಬೇಕಾಗಿದೆ. ಇದಕ್ಕಾಗಿ ಅಲ್ಲಲ್ಲಿ ತಜ್ಞರ ಒಂದು ಶಿಬಿರವನ್ನು ಏರ್ಪಡಿಸಿ ರೈತರಿಗೆ ತರಬೇತಿಯನ್ನು ಕೊಡಿಸುವ ಬಗ್ಗೆ ವ್ಯವಸ್ಥೆ ಮಾಡಿಸಬೇಕಾಗಿದೆ. ಮತ್ತು ಯಾವ ಯಾವ ಜಮೀನಿನಲ್ಲಿ ಯಾವ ಬೀಜಗಳನ್ನು ಹಾಕಿದರೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಎಲ್ಲಾ ಶಾಸ್ತ್ರೀಯವಾದ ಒಂದು ರೀತಿಯಲ್ಲಿ ರೈತರಿಗೆ ಮಾರ್ಗದರ್ಶನ ಕೊಡಬೇಕಾಗಿದೆ. ಆ ದೃಷ್ಟಿಯಿಂದ ಇವತ್ತು ತಾವು ಏನು ಇದರಲ್ಲಿ ತಜ್ಞರನ್ನೇ ಅಧ್ಯಕ್ಷರನ್ನಾಗಿ ಹಾಕಬೇಕೆಂದು ಬಿಲ್ಲನ್ನು ತಂದಿದ್ದೀರಿ ಅದಕ್ಕಾಗಿ ನಾನು ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಮತ್ತು ಇದು ಉತ್ತಮವಾದ ಬಿಲ್ ಆಗಿರುವುದರಿಂದ ರೈತರ ಸಾರ್ವಜನಿಕರ ಉನ್ನತಿ ಮತ್ತು ಏಳಿಗೆ ಆಗುತ್ತದೆ ಎನ್ನುವ ಆಸೆ ಕೂಡ ಇದೆ ಆ ದೃಷ್ಟಿಯಿಂದಲೂ ಸಹ ನಾನು ಇದನ್ನು ಮತ್ತೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಇಷ್ಟು ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಆರ್ಥ ಹಾಗೂ ಯೋಜನಾ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ಈ ಮಸೂದೆ ಬಹಳ ಮಹತ್ವವಾದ ಮಸೂದೆ. ನೀರಾವರಿಯಿಂದ ಅಭಿವೃದ್ಧಿಗೊಳ್ಳಬೇಕಾದಂಥಹ ಜಾಗಗಳನ್ನು ಸರಿಯಾದ ವ್ಯವಸ್ಥಿತ ರೀತಿಯಲ್ಲಿ ಪ್ರಗತಿ ಹೊಂದುವಂತೆ ಮಾಡುವಲ್ಲಿ ಮತ್ತು ಸಿಕ್ಕಸಕ್ಕಂತಹ ನೀರನ್ನು ದಕ್ಷತೆಯಿಂದ ಹಂಚುವಂತಹ ಮತ್ತು ಆ ಪ್ರದೇಶದಲ್ಲಿ ವಿಫಲವಾದಂತ ಬೆಳೆ ಬೆಳೆಯ ದಿದ್ದರೂ ಕೂಡ ದಕ್ಷತೆಯಿಂದ ಬೇರೆ ಬೇರೆ ಯಾವ ಶಾಖೆಗಳಿವೆ, ಏಜೆನ್ಸಿಗಳಿವೆ ಅವುಗಳನ್ನು ಒಂದು ಕಡೆಯಲ್ಲಿ ತೆಗೆದು ಕೊಂಡು ಹೋಗಿ ನಮ್ಮ ಈ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವುದರಲ್ಲಿ ಈ ಒಂದು ಕಮ್ಯಾಂಡ್ ಏರಿಯಾ ಅಥಾರಿಟಿ ಮಹತ್ವದ ಪಾತ್ರವನ್ನು ವಹಿಸಲಿದೆ. ನ್ಯಾಷನಲ್ ಕಮೀಷನ್ ಆಫ್ ಅಗ್ರಿಕಲ್ಚರ್ ಮತ್ತು ಇರಿಗೇಷನ್ ಕಮೀಷನ್ ಯಾವಾಗಲೂ ಕೂಡ ಈ ದಿಸೆಯಲ್ಲಿ ಸಾಕಷ್ಟು ಚರ್ಚೆಗಳನ್ನು ಅನೇಕ ಸಂದರ್ಭಗಳಲ್ಲಿ ಮಾಡಿಕೊಂಡು ವ್ಯವಸ್ಥಿತ ಬೆಳವಣಿಗೆಯನ್ನು ಈ ಒಂದು ಸೆಕ್ಟಾರ್‌ನಲ್ಲಿ ಮಾಡಿಲ್ಲ ; ಆದುದರಿಂದಲೇ ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯನ್ನು ಸಾ ಪನೆ ಮಾಡ ಬೇಕೆಂದು, ತನ್ಮೂಲಕ ಸ್ಥೂಲವಾಗಿ ಆ ಪ್ರದೇಶ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಆಲೋಚನೆ ಮಾಡಿ ಸರ್ಕಾರ ಈ ಒಂದು ಮಸೂದೆಯನ್ನು ತಂದಿದೆ. ಇದರ ಉದ್ದೇಶ ಬಹಳ ಮಹತ್ವದ್ದಾಗಿದೆ. ಇಡೀ ಕರ್ನಾಟಕದ ರೂಪರೇಷೆಯನ್ನೇ, ಆರ್ಥಿಕ ಹಾಗೂ ಸಾಮಾಜಿಕ ರೂಪರೇಷೆಯನ್ನೇ ಬದಲಾವಣೆ ಮಾಡತಕ್ಕಂತಹದ್ದು ಈ ಒಂದು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ ಆಗಿದೆ: ಮಾನ್ಯ ಸದಸ್ಯರಾದಂತಹ ಶ್ರೀನಿವಾಸ್‌ರವರು ಹೇಳಿದರು, ಇದರ ಉದ್ದೇಶ ಏನೋ ಚೆನ್ನಾಗಿದೆ ಆದರೆ ಆ ಉದ್ದೇಶವನ್ನು ನಡೆಸಿಕೊಳ್ಳುವಂತಹ ಒಂದು ಸಾಧನೆಯನ್ನು ನೀವು ಮಾಡಬೇಕು ಎಂದು ಹೌದು. ಯಾವುದೇ ಒಂದು ಕಾರ್ಯಕ್ರಮ ಪ್ರಜಾಸ್ವಾಭುತ್ವ ರಾಷ್ಟ್ರದಲ್ಲಿ ಆಗಬೇಕಾದರೆ ರಾಜಕೀಯ ಇಚ್ಛಾಶಕ್ತಿ ಬೇಕು. ಆ ಶಕ್ತಿಯನ್ನು ಗತಿಸಲು ಅನೇಕ ಪ್ರಸಂಗಗಳು ಬರಬಹುದು. ಅದಕ್ಕೆ ಹಿಂಜರಿಯದೆ ಆಡಳಿತಾತ್ಮಕವಾಗಿ ನಮ್ಮ ದೇಶದಲ್ಲಿ ಅಮೂಲ್ಯವಾದಂತಹ ಯಾವ ಸಾಧನಗಳು ಇವೆ ಅವುಗಳನ್ನು ಉಪಯೋಗ ಮಾಡಿ ಕೊಳ್ಳುವಂತಹ ದೃಢ ಸಂಕಲ್ಪ ಇದ್ದರೆ ಯಶಸ್ಸನ್ನು ಪಡೆಯಬಹುದು : ಇಲ್ಲದಿದ್ದರೆ ಯಾವುದೇ ಅಥಾರಿಟಿಯನ್ನು ಮಾಡಿದರೂ ಕೂಡ ಅದು ಕೇವಲ ನಾಮಕಾವಸ್ಥೆಗೆ ಮಾಡಿದಂತಾಗುತ್ತದೆಯೇ ವಿನಹಃ ತನ್ಮೂಲಕ ಸಾಧನಗಳನ್ನು ಉಪಯೋಗ ಮಾಡಿಕೊಂಡು ದೇಶದ ಸಂಪತ್ತನ್ನು ಅಭಿವೃದ್ಧಿ ಮಾಡುವುದ ಕ್ಕಾಗುವುದಿಲ್ಲ. ಯಾವುದೇ ಕಾರ್ಪೊರೇಷನ್ನಿನ ಅಥವಾ ಬೋರ್ಡಿನ ಅಧ್ಯಕ್ಷರನ್ನಾಗಲೀ, ಸದಸ್ಯರನ್ನಾಗಲೀ,

ಅವರು ಆಡಳಿತಾತ್ಮಕವಾಗಿ ಕೆಲಸ ಮಾಡುತ್ತಿದ್ದಾಗ ನಾವು ಬದಲಾವಣೆ ಮಾಡಬಾರದು. ಇಂಥ ಒಂದು ಸತ್ ಸಂಪ್ರದಾಯವನ್ನು ಹಾಕುವುದೆಂದರೆ ನನಗೆ ಬಹಳ ಸಂತೋಷ ಇಂಥ ಒಂದು ಸತ್ ಸಂಪ್ರದಾಯವನ್ನು ಹಾಕತಕ್ಕಂತಹ ಸುಬುದ್ಧಿ ನಮ್ಮ ಪ್ರಜಾಪ್ರಭುತ್ವದಲ್ಲಿ ಬೆಳೆದಾಗ ಅಥವಾ ಬೆಳೆಯಲಿಕ್ಕೆ ನೀವು ಪ್ರೋತ್ಸಾಹ ಕೊಟ್ಟರೆ, ಯಾವ ಒಂದು ರಾಜಕೀಯ ಇಚ್ಛಾಶಕ್ತಿಯಿಂದ ನಮ್ಮ ಸರ್ಕಾರವನ್ನು ಏನು ನಾವು ರಚಿಸಿದ್ದೇವೆ, ನಡೆಸಿಕೊಂಡು ಬರುತ್ತಿದ್ದೇವೆ ಅದಕ್ಕೆ ತಮ್ಮ ಬೆಂಬಲ ಕೊಟ್ಟರೆ ಖಂಡಿತವಾಗಿ ಯಶಸ್ಸು ದೊರೆಯುತ್ತದೆಂದು ನಂಬಿದ್ದೇನೆ. ಇಂಥ ಒಂದು ಸುಬುದ್ಧಿಯನ್ನು ನಾವು ಬೆಳಿಸಿಕೊಂಡು ಹೋಗುತ್ತಿರುವುದರಿಂದ ನೀವು ಧೈರ್ಯವಾಗಿರಬಹುದು. ಆದರೆ ಎಲ್ಲೆಲ್ಲಿ ಈ ಸಂಪ್ರದಾಯವನ್ನು ಮುರಿದು ಒಂದು ರಾಜಕೀಯವಾದ ಸಂಪ್ರದಾಯವನ್ನು ಹಾಕಿದ್ದಾರೋ : ಬಹುಶಃ ಹೀಗೆ ಹಾಕುವುದರಿಂದ ಪ್ರಗತಿಗೆ ಎಲ್ಲಿ ತೊಂದರೆ ಬರುತ್ತದೋ ಅಂಥ ಕಡೆ ರಾಜಕೀಯ ಇಚ್ಛಾಶಕ್ತಿಯನ್ನು ಉಪಯೋಗ ಮಾಡಿಕೊಂಡು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ನಾವು ಮುಂದುವರಿದುಕೊಂಡು ಹೋಗಬಹುದು ಬಹಳ ಅಗತ್ಯವಾಗಿದೆ. ಆ ದೃಷ್ಟಿಯಿಂದಲೇ ನಮ್ಮ ಸರ್ಕಾರ ಕಾರ್ಯಕ್ರಮವನ್ನು ಮಾಡುತ್ತದೆ. ಕೇವಲ ರಾಜಕೀಯ ದೃಷ್ಟಿಯಿಂದ ಬೋರ್ಡುಗಳ ಕಾರ್ಪೊರೇಷನ್‌ಗಳ ಸಂಖ್ಯೆಯನ್ನು ಬೆಳಿಸುವುದು, ಸದಸ್ಯರನ್ನು ಮುಂದುವರಿಸಿಕೊಂಡು ಹೋಗುವ ಇಚ್ಛೆ ಸರ್ಕಾರಕ್ಕೆ ಇಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬಾಕಿ ಬೋರ್ಡುಗಳ ಹಾಗೂ ಕಾರ್ಪೊರೇಷನ್‌ಗಳ ಅಗತ್ಯವನ್ನು ತಾವು ದಯಮಾಡಿ ವಿವರ್ಶೆ ಮಾಡುತ್ತಿರಾ ಎಂದು ಕೇಳುತ್ತೇನೆ. ಈ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿ ಪ್ರಾಧಿಕಾರಗಳು ಏನಿವೆ ಇವು ಅಗತ್ಯ ಎಂಬುದನ್ನು ಒಪ್ಪಿಕೊಳ್ಳುತ್ತೀರಿ. ಅದಕ್ಕೋಸ್ಕರವೇ ಈ ವಿಧೇಯಕವನ್ನು ತಂದಿದ್ದೀರಿ. ಹಾಲಿ ಪ್ರಾಧಿಕಾರದಲ್ಲಿ ಕೇವಲ ಅಧಿಕಾರಿಗಳನ್ನೇ ಅಧ್ಯಕ್ಷರನ್ನಾಗಿ ಸದಸ್ಯರನ್ನಾಗಿ ನೇಮಿಸದೆ ಖಾಸಗಿಯವರನ್ನು ನೇಮಿಸುವ ತತ್ವವನ್ನು ಒಪ್ಪಿಕೊಳ್ಳುತ್ತೀರೆಂದು ನನ್ನ ನಂಬಿಕೆ. ಹಾಗೆ ಒಪ್ಪಿ ಕೊಳ್ಳುವುದಾದರೆ ೨-೩ ತಿಂಗಳೊಳಗೆ ಎಲ್ಲ ಪ್ರಾಧಿಕಾರಗಳ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು (ತಮಗೆ ಯೋಗ್ಯರೆಂದು ಕಂಡುಬಂದವರನ್ನು) ಬೇರೆ ನೇಮಕ ಮಾಡುತ್ತೇವೆಂಬ ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಪ್ರಾಧಿಕಾರಗಳ ಬಗ್ಗೆ ನಾನು ಆಗಲೇ ಹೇಳಿದೆ. ಎಲ್ಲೆಲ್ಲಿ ಸತ್‌ಸಂಪ್ರದಾಯ ಇದೆ ಅದನ್ನು ಅನುಸರಿಸಿಕೊಂಡು ಹೋಗೋಣ : ಹಾಗೂ ಎಲ್ಲೆಲ್ಲಿ ರಾಜಕೀಯ ಮಾಡಿ ಹೊಸ ಸಂಪ್ರದಾಯಗಳನ್ನು ಹಾಕಿದ್ದಾರೆ ಅಂಥದ್ದನ್ನು ತೆಗೆದು ಸತ್‌ಸಂಪ್ರದಾಯವನ್ನು ಬೆಳಸತಕ್ಕ ಸಂಕಲ್ಪ ಮಾಡಿದ್ದೇವೆಂದು ಹೇಳಿದೆ. ಇನ್ನು ಪ್ರಾಧಿಕಾರದಲ್ಲಿ ನಾನ್ ಆಫಿಷಿಯಲ್ ಅನ್ನು ಸದಸ್ಯರನ್ನಾಗಿ ಹಾಕುವಂತಹ ಅವಕಾಶ ಕೂಡ ಈ ಮಸೂದೆಯಲ್ಲಿದೆ. ಈಗ ಡೆವಲಪ್‌ಮೆಂಟ್ ಕಮೀಷನರ್ ಅನ್ನು ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿಯ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಡಿವಿಜನಲ್ ಕಮೀಷನರನ್ನು ನಾವು ಅಧ್ಯಕ್ಷರನ್ನಾಗಿ ಮಾಡಿಲ್ಲ. ಸಂದರ್ಭ ಬಂದಾಗ ದಕ್ಷ ಆಡಳಿತದ ದೃಷ್ಟಿಯಿಂದ ನಾನ್ ಆಫಿಷಿಯಲ್ಸ್ ಅನ್ನು ಅಧ್ಯಕ್ಷರನ್ನಾಗಿ ಹಾಕಬೇಕಾದರೆ ಹಾಕೋಣ. ಆ ಪ್ರಶ್ನೆ ಈಗ ಬರುವುದಿಲ್ಲ.

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ನಿಜ. ಪ್ರಾಧಿಕಾರದ ಕಲ್ಪನೆಯ ವಿಧೇಯಕ ಹುಟ್ಟಿರುವುದೇ ಆ ಅಗತ್ಯವನ್ನು ಮನಗಂಡು. ಯಾವುದೇ ಅಧಿಕಾರಿಯಾಗಲಿ ಭೂ ಅಭಿವೃದ್ಧಿಯ ಕೆಲಸಗಳನ್ನು ಬೆಂಗಳೂರಿನಲ್ಲಿ ತೆಗೆದುಕೊಂಡು ನಿರ್ವಹಿಸಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ ಇಲಾಖೆಗಳಿವೆ ಎಲ್ಲಾ ಇಲಾಖೆಗಳಿಗೂ ಮುಖ್ಯಸ್ಥರು ಕಮೀಷನರ್ ಇದ್ದಾರೆ. ಹೀಗಿದ್ದರೂ ಕೂಡ ಅಚ್ಚುಕಟ್ಟು ಪ್ರದೇಶದ ಅಭಿವೃದ್ಧಿಯನ್ನು ಅವರ ಮೂಲಕ ಸಾಧನೆ ಮಾಡುವುದಕ್ಕೆ ಆಗುವುದಿಲ್ಲವಾದಕಾರಣದಿಂದಲೇ ಈ ವಿಧೇಯಕ ರೂಪುಗೊಂಡಿದೆ. ಆದಕಾರಣ ಕಮ್ಯಾಂಡ್ ಏರಿಯಾಕ್ಕೂ ಬೇರೆ ಅಥಾರಿಟಿ ಇರಬೇಕು. ಬೇರೆ ಬೇರೆ ಇಲಾಖೆಗಳಿಗೆ ಏನು ಅಧಿಕಾರ ಇದೆ ಆ ಅಧಿಕಾರ ವಿಕೇಂದ್ರೀಕರಣವಾಗಿ ಈ ಪ್ರಾಧಿಕಾರದಲ್ಲಿ ದೊರಕಬೇಕು. ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಖಾಸಗಿಯವರನ್ನು ದಕ್ಷ ಅಧ್ಯಕ್ಷರನ್ನಾಗಿ ಸದಸ್ಯರನ್ನಾಗಿ ಇಟ್ಟುಕೊಂಡು ಕೆಲಸ ಮಾಡಬೇಕೆಂಬುದೇ ಈ ವಿಧೇಯಕದಲ್ಲಿರುವ ಯೋಜನೆಯಾದ್ದರಿಂದ ಅದನ್ನು ಕಾರ್ಯಗತ ಮಾಡಬೇಕು. ಒಂದುವೇಳೆ ಅದರಲ್ಲಿ ಶ್ರದ್ಧೆ ಇಲ್ಲದಿದ್ದರೆ ಬೇಕಾದ ರೀತಿಯಲ್ಲಿ ಮಾರ್ಪಾಡು ಮಾಡುವುದಕ್ಕೆ ಏನು ತೊಂದರೆಯಿಲ್ಲ. ಈ ಯೋಜನೆಯನ್ನು ಒಪ್ಪುವುದಾದರೆ, ಪ್ರಾಧಿಕಾರದಲ್ಲಿ ತಕ್ಷಣ ಖಾಸಗೀ ಅಧ್ಯಕ್ಷರನ್ನು ನೇಮಕ ಮಾಡುತ್ತೇವೆಂದು ಹೇಳಬೇಕು. ಇದರಲ್ಲಿ ವಿವರ್ಶೆ ಮಾಡುವುದಕ್ಕೆ ಏನು ಉಳಿದಿಲ್ಲ.

ಹಾಗೂ ವಿಮರ್ಶೆ ಮಾಡಬೇಕೆಂದಿದ್ದರೆ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು ಸಾಕಷ್ಟು ವಿಮರ್ಶೆ ಮಾಡಿ ಸದನದ ಮುಂದೆ ತನ್ನಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಈ ವಿಕೇಂದ್ರೀಕರಣ ತತ್ವದ ಪ್ರಕಾರ ಕಮ್ಯಾಂಡ್ ಏರಿಯಾ ಆಥಾರಿಟಿಯನ್ನು ನಡೆಸಿಕೊಳ್ಳಬೇಕಾದರೆ ದಕ್ಷ ಅಧ್ಯಕ್ಷರಿರಬೇಕೆಂಬ ವಾದವನ್ನು ಒಪ್ಪುತ್ತೇನೆ. ನಮ್ಮ ಉದ್ದೇಶ ಕೂಡ ಅದೇ ಆಗಿದೆ. ಏತಕ್ಕೆಂದರೆ ನಮಗೆ ಕಾರ್ಯಕ್ರಮ ಅನುಷ್ಠಾನವಾಗಬೇಕು.

೪-೦೦ ಪಿ. ಎಂ.

ದಕ್ಷ ಅಧ್ಯಕ್ಷರು ನಾನ್ ಆಫಿಷಿಯಲ್ ಕ್ಯಾಟಗರಿಯಲ್ಲೂ ಇದ್ದಾರೆ, ಆಫಿಷಿಯಲ್ಸ್‌ನಲ್ಲೂ ಇದ್ದಾರೆ. ಉದ್ದೇಶ ಸಾಧನೆ ಮಾಡಬಾರದು ಎಂಬ ಅಭಿಪ್ರಾಯ ನಮ್ಮದೇನೂ ಅಲ್ಲ. ಇಷ್ಟು ಹೇಳಿದ ಮಾತ್ರಕ್ಕೆ We don't want to make this a rehabilitation centre for our officers ನಮ್ಮ ಉದ್ದೇಶ ಅಲ್ಲಿ ಅನುಷ್ಠಾನ ಆಗಬೇಕು. ಯಾರನ್ನು ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ವಿಚಾರವನ್ನು ಸರ್ಕಾರಕ್ಕೆ ಬಿಡಿ. ನಾವು ಅದನ್ನು ಮಾಡುತ್ತೇವೆ. ತಾವು (ಮಾನ್ಯ ಸದಸ್ಯರು) ಸಲಹೆ ಕೊಟ್ಟಿದ್ದೀರಿ ನಾನ್-ಆಫಿಷಿಯಲ್ ಅಧ್ಯಕ್ಷರನ್ನು ಮಾಡಿದರೆ ಕಾರ್ಯಕ್ರಮ ಯಶಸ್ವಿಯಾಗಿ ಆಗುತ್ತದೆ ಎಂದು. ಅದನ್ನು ನಾವು ನೋಡುತ್ತೇವೆ. ಆಡಳಿತಾತ್ಮಕವಾಗಿ ಕರ್ನಾಟಕದ ಆರ್ಥಿಕ ಅಭಿವೃದ್ಧಿಯನ್ನು ಸಂಯೋಜನೆ ಮಾಡತಕ್ಕ ಅಭಿವೃದ್ಧಿ ಕಮಿಷನರ್‌ರವರು ಅದರ ಅಧ್ಯಕ್ಷರಾಗಿದ್ದಾರೆ. ಹಾಗೆಂದ ಮಾತ್ರಕ್ಕೆ ನಾನ್-ಆಫಿಷಿಯಲ್ಸ್‌ನ್ನು ಅದರ ಅಧ್ಯಕ್ಷರನ್ನಾಗಿ ಮಾಡಬಾರದು ಎಂಬ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ತಿಳಿದುಕೊಳ್ಳುವ ಅವಶ್ಯಕತೆಯೂ ಇಲ್ಲ. ಬೋರ್ಡ್‌ಗಳು, ಕಾರ್ಪೊರೇಷನ್‌ಗಳು, ಇನ್ನಿತರ ಸರ್ಕಾರದ ಪ್ರಾಧಿಕಾರಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವುದಕ್ಕೆ ಡೆಲ್ಲಿಗೆ ಪ್ರಯಾಣ ಮಾಡಿಕೊಂಡು ಅಲ್ಲಿಂದ ಹುಕುಂ ತರುವಂಥ ಕೆಲಸ ಮಾಡಬೇಡಿ ಎಂದು ತಾವು (ವಿರೋಧಿ ಸದಸ್ಯರು) ಹೇಳಿದ್ದೀರಿ. ಆದರೆ ಈ ಸಲಹೆಯನ್ನು ಬಹಳ ತಡವಾಗಿ ಕೊಡುತ್ತಿದ್ದೀರಿ ಬರೀ ಡೆಲ್ಲಿ ಆದರೆ ತೊಂದರೆ ಇಲ್ಲ : ಕಲ್ಕತ್ತಾ, ಕಾಶ್ಮೀರ, ಮದ್ರಾಸ್ ಎಲ್ಲಾ ಸುತ್ತಿಕೊಂಡು ಬೇರೆ ಬೇರೆ ಕಡೆ ಬೇರೆ ಬೇರೆ ನಿರ್ಣಯ ಮಾಡುವಂಥ ವಹಿವಾಟು ನಮ್ಮ ಸರ್ಕಾರಕ್ಕಾಗಲೀ ನಮ್ಮ ಪಕ್ಷಕ್ಕಾಗಲೀ ಇಲ್ಲ, ಅಂಥ ಕೆಲಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅಗತ್ಯವಾಗಿ ಮಾಡಬೇಕಾದ ವಿಷಯದಲ್ಲಿ ಬೇಕಾದರೆ ನ್ಯೂಯಾರ್ಕಿಗೆ ಹೋಗಿ ಮಾಡಿಕೊಂಡು ಬನ್ನಿ, ಬೇಡ ಎಂದು ಹೇಳುವುದಿಲ್ಲ. ಆದರೆ ಈ ವಿಷಯದಲ್ಲಿ ಬೇಡ ಎಂದು ಹೇಳುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಬೆಳಿಗ್ಗೆ ಒಂದು ನಿರ್ಣಯ, ರಾತ್ರಿ ಒಂದು ನಿರ್ಣಯ ನಮ್ಮ ಸರ್ಕಾರ ಮಾಡುವುದಿಲ್ಲ. ಯಾವುದೇ ಒಂದು ನಿರ್ಣಯವನ್ನು ನಾವು ಮಾಡಿದರೆ ಅದು ಆಡಳಿತಾತ್ಮಕವಾಗಿ ತಾತ್ವಿಕವಾದ ದೃಷ್ಟಿಯಿಂದ ಆ ನಿರ್ಣಯವನ್ನು ಅನುಷ್ಠಾನ ಮಾಡೇ ಮಾಡುತ್ತೇವೆ ಎಂಬ ದೃಢಸಂಕಲ್ಪ ಮತ್ತು ರಾಜಕೀಯ ಶಕ್ತಿ ನಮ್ಮ ಸರ್ಕಾರಕ್ಕೆ ಖಂಡಿತವಾಗಿಯೂ ಇದೆ. ಡೆಲ್ಲಿಗೆ ಯಾರು ಯಾರು ಎಷ್ಟೆಷ್ಟು ಸಾರಿ ಯಾವ ಯಾವ ಸಂದರ್ಭದಲ್ಲಿ ಪ್ರಯಾಣ ಮಾಡಿದ್ದಾರೆ ಎಂಬ ಬಗ್ಗೆ ಚರ್ಚೆ ಮಾಡುವುದು ಅನಾವಶ್ಯಕ. ಆ ಬಗ್ಗೆ ನಾನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಬಹಳ ಸಂತೋಷದ ವಿಚಾರ ಎಂದು ಹೇಳಿದರೆ .....

ಶ್ರೀ ಜೆ. ಹೆಚ್. ಪಟೇಲ್.— ಡೆಲ್ಲಿ ಬಗ್ಗೆ ಅವರು ಪ್ರಸ್ತಾಪ ಮಾಡಿದರು. ಡೆಲ್ಲಿ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೇ ಇರುವುದು ಒಳ್ಳೆಯದು ಎಂದು ನಾನು ಅವರಿಗೆ ಸಲಹೆ ಕೊಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ದೇಶದಲ್ಲಿ ಅಭದ್ರತೆ ತಾಂಡವವಾಡುತ್ತಿದ್ದಾಗ, ಈ ದೇಶದ ಆಡಳಿತದ ಚುಕ್ಕಾಣಿ ಯಾವುದೋ ಕಡೆಗೆ ಹೋಗುತ್ತಿದ್ದಾಗ ದೇಶಕ್ಕೆ ಸುಭದ್ರತೆ ಕೊಡತಕ್ಕ ನಾಯಕಿ ಡೆಲ್ಲಿಯಲ್ಲಿರುವುದನ್ನು ತಿಳಿದು ಅವರಿಂದ ಸ್ಫೂರ್ತಿ ಪಡೆದು ರಾಜಕೀಯ ಇಚ್ಛಾಸಕ್ತಿಯನ್ನು ಪ್ರಯೋಗ ಮಾಡುವುದು ಒಳ್ಳೆಯದು ಎಂದು ದೇಶದ ಜನ ತಿಳಿದುಕೊಂಡಿದ್ದಾರೆ, ನಾವೂ ತಿಳಿದುಕೊಂಡಿದ್ದೇವೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ನೀವು ಸ್ಫೂರ್ತಿ ಪಡೆದಿದ್ದೀರೆಂಬುದು ಈ ೪೮ ದಿವಸದಲ್ಲೇ ಗೊತ್ತಾಗಿದೆ. ನೀವು ಸ್ಫೂರ್ತಿ ಪಡೆದೇ ಸರ್ಕಾರ ಸ್ಥಾಪನೆ ಮಾಡಿದ್ದೀರಿ.

ಛೇರ್ಮನ್.— ಈ ವಿಷಯಗಳನ್ನೆಲ್ಲಾ ಹೆಚ್ಚು ಪ್ರಸ್ತಾಪ ಮಾಡುತ್ತಾ ಹೋಗುವುದು ಸರಿಯಲ್ಲ. ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ದೇಶದ ಜನ ಪಾಠ ಕಲಿಸಿಕೊಟ್ಟರೂ ಕೂಡ ಅದನ್ನು ಕಲಿಯುವುದಕ್ಕೆ ಮನಸ್ಸು ಮಾಡುವುದಿಲ್ಲ ಎಂದು ಹೇಳಿದರೆ ಯಾವ ದಿಕ್ಕಿನಲ್ಲಿ ನಾವಿದ್ದೇವೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ .— ಪಾಠ ಕಲಿಸುವುದು it is a continuous process. But let us not be insisted to learn always. We are prepared to learn wherever it is necessary. But do not try to emphasise that we are always to learn all the time and to approach the Government all the time for anything and everything. Let us not have a feeling that it is a permanent feature. We have seen the empires falling and destroyed.

ಶ್ರೀ ಎಂ. ವೀರಪ್ಪ ಮೊಯಿಲಿ. — ಮಾನ್ಯ ಗಂಗಾದರ್ ಅವರು, ಯಾವುದೇ ಕಾರ್ಪೊರೇಷನ್ ಅಥವಾ ಬೋರ್ಡ್ ಆಗಲೀ ಅದು ರಿಹಾಬಿಲಿಟೇಷನ್ ಸೆಂಟರ್ ಆಗಬಾರದು ಎಂದು ಹೇಳಿದ್ದಾರೆ. ಅದನ್ನು ನಾನೂ ಒಪ್ಪುತ್ತೇನೆ. ಆ ರೀತಿ ಆಗಬಾರದು. ಯಾವ ವರ್ಗದ ಜನರಿಗಾಗಿ ಈ ಬೋರ್ಡ್ಸ್ ಮತ್ತು ಕಾರ್ಪೊರೇಷನ್‌ಗಳು ಸ್ಥಾಪನೆ ಆಗಿದೆಯೋ ಅವರ ಹಿತಾಸಕ್ತಿ ನಮಗೆ ಮುಖ್ಯವೇ ಹೊರತು ಆ ಸಂಸ್ಥೆಯನ್ನು ಯಾವುದೇ ಒಂದು ಸ್ವಾರ್ಥಕ್ಕಾಗಿ ಉಪಯೋಗಿಸುವಂಥ ಒಂದು ಪ್ರವೃತ್ತಿ ನಮ್ಮ ಸರ್ಕಾರಕ್ಕಿಲ್ಲ. ಕಾರ್ಪೊರೇಷನ್ ಅಥವಾ ಬೋರ್ಡ್‌ಗಳು ಖರ್ಚು ಮಾಡುವಂಥ ಕೊನೇ ಪೈಸೆ ಕೂಡ ಜನರ ಹಿತಕ್ಕಾಗಿ ಖರ್ಚಾಗಬೇಕು, ಯಾರ ಹಿತಕ್ಕಾಗಿ ನಾವು ಹಣವನ್ನು ಖರ್ಚು ಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿರುತ್ತೇವೋ ಅವರಿಗೇ ಉಪಯೋಗವಾಗುವ ರೀತಿಯಲ್ಲಿ ನಮ್ಮ ಸರ್ಕಾರ ಖಂಡಿತ ಕೆಲಸ ಮಾಡುತ್ತದೆ. ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಯಾವ ಸಂಶಯವೂ ಬೇಡ. ಎಲ್ಲೆಲ್ಲಿ ತಜ್ಞರನ್ನು ನೇಮಕ ಮಾಡಬೇಕೋ ಅಲ್ಲಿ ಅವರನ್ನು ಮಾಡುತ್ತೇವೆ ಆ ರೀತಿ ತಜ್ಞರನ್ನು ಅವಶ್ಯವಿದ್ದ ಕಡೆ ನೇಮಕ ಮಾಡಿಕೊಂಡು ಕೆಲಸ ಮಾಡುವಂಥ ಒಂದು ವ್ಯವಸ್ಥೆಯನ್ನು ಖಂಡಿತವಾಗಿಯೂ ಈ ಪ್ರಾಧಿಕಾರದ ಮೂಲಕ ಮಾಡುತ್ತೇವೆ ಇನ್ನು ಕ್ಲಾಸ್ 43 Bar of jurisdiction of Civil Courts ಬಗ್ಗೆ ಹೇಳಿದ್ದಾರೆ ಆ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅಧಿಕಾರಿಗಳಲ್ಲಿ ಎಲ್ಲಾ ತರಹದ ಅಧಿಕಾರಿಗಳೂ ನಮ್ಮಲ್ಲಿ ಇರುತ್ತಾರೆ. ತಪ್ಪಿತಸ್ಥ ಅಧಿಕಾರಿಗಳು ಯಾರೇ ಆಗಲಿ ಅವರ ರಕ್ಷಣೆಯನ್ನು ಎಲ್ಲಿಯವರೆಗೆ ಮಾಡುತ್ತೇವೆ ಅಲ್ಲಿಯವರೆಗೆ ನಾವು ಸರ್ಕಾರದ ಆಡಳಿತದಲ್ಲಿ ದಕ್ಷತೆಯನ್ನು ಗಳಿಸುವುದಕ್ಕೆ ಬರುವುದಿಲ್ಲ. ಯಾರು ತಪ್ಪಿತಸ್ಥ ಅಧಿಕಾರಿಗಳಿರುತ್ತಾರೆ ಅವರನ್ನು ಶಿಕ್ಷಿಸಲೇಬೇಕು. ನಮ್ಮ ಸರ್ಕಾರ ತಪ್ಪಿತಸ್ಥ ಅಧಿಕಾರಿಗಳನ್ನು ಯಾವ ರೀತಿಯಲ್ಲೂ ರಕ್ಷಣೆ ಮಾಡುವುದಿಲ್ಲ. ಇದಕ್ಕೆ ಸಾಕಷ್ಟು ಕಾನೂನಿನ ಬಲ ಕೂಡ ಇದೆ. ತಪ್ಪಿತಸ್ಥರನ್ನು ಶಿಕ್ಷೆ ಮಾಡುವಂಥ ಬಲಿಷ್ಠವಾದ ಬಾಹು ಕೂಡ ನಮ್ಮ ಸರ್ಕಾರಕ್ಕಿದೆ. ಅವರು ಎಲ್ಲಿಗೂ ತಪ್ಪಿಸಿಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಯಾರು ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತಾರೆ, ಯಾರು ಸರ್ಕಾರದ ಕಾರ್ಯಕ್ರಮಗಳನ್ನು ಸದುದ್ದೇಶದಿಂದ ಜಾರಿ ಮಾಡಬೇಕು ಎಂಬ ಉತ್ತಮ ಅಧಿಕಾರಿಗಳಿದ್ದಾರೆ, ಆಯಾ ಪ್ರದೇಶದ ಜನರ ಹಿತವನ್ನು ಸಾಧನೆ ಮಾಡಬೇಕೆಂಬ ಮನೋಭಾವವಿರುವ ಅಧಿಕಾರಿಗಳೇ ನಿದ್ದಾರೆ ಅಂಥವರಿಗೆ ಪ್ರೋತ್ಸಾಹವನ್ನೂ ನೀಡಬೇಕಾಗಿದೆ. ಅವರು ಮಾಡುವಂಥ ಕಾರ್ಯಕ್ರಮದಲ್ಲಿ ಯಾವುದೇ ತಂಕ ಬಂದರೂ ಅದನ್ನು ಎದುರಿಸಿ ಅವರು ಕೆಲಸ ಮಾಡಬೇಕಾಗುತ್ತದೆ. There is a bar of jurisdiction of Civil Courts. Section 43 is not a blanket bar. Please look to Section 43 (3) (4) (5). ಕಮ್ಯಾಂಡ್ ಏರಿಯಾ ಅಥಾರಿಟಿ ಮುಖಾಂತರ ಆ ಜನಗಳ ಸೇವೆ ಮಾಡಬೇಕು ಎಂದು ಹೊರಟಾಗ ದುರ್ಬಲರಾಗಿರತಕ್ಕ ಜನರನ್ನು ಪಕ್ಕಕ್ಕೆ ನೂಕಿ ದುರ್ಬಲರಾದ ಜನರಿಗೆ ಸಿಗತಕ್ಕ ಉಪಯೋಗವನ್ನು ತಾವೇ ಪಡೆದುಕೊಳ್ಳಬೇಕು. ಅದನ್ನು ತಾವೇ ಕಬಳಿಸಬೇಕು ಎಂದು ಕೆಲವು ವರ್ಗದ ಜನ ಇರುತ್ತಾರೆ, ದುರ್ಬಲವರ್ಗದ ಜನರ ಪ್ರಗತಿಗಾಗಿ ಕಾರ್ಯಕ್ರಮವನ್ನು ಸರಿಯಾಗಿ ನೀತಿಯುತವಾಗಿ ಜಾರಿ ಮಾಡುವಾಗ ಕೆಲವು ವ್ಯಕ್ತಿಗಳು ಬಲಿಷ್ಠರಾದ, ಪ್ರಭಾವಶಾಲಿಗಳಾದ ವ್ಯಕ್ತಿಗಳು ಅದಕ್ಕೆ ತಡೆ ಬಂದಾಗ ಅವರ ವಿರುದ್ಧ ಹೋರಾಟ ಮಾಡಬೇಕಾದ ಅವಶ್ಯಕತೆ ಕೂಡ ಅಧಿಕಾರಿಗಳಿಗೆ ಇರುತ್ತದೆ. ಆಗ ನಾವು ಅವರಿಗೆ ಪ್ರೋತ್ಸಾಹ ಕೊಡಬೇಕು, ಮತ್ತು ರಕ್ಷಣೆ ಕೂಡ ಕೊಡಬೇಕು. ರಕ್ಷಣೆ ಇಲ್ಲದಿದ್ದರೆ, ಯಾವ ಮುತುವರ್ಜಿ ಇಲ್ಲದಿದ್ದರೆ ನಿಸ್ತೇಜರಾಗುತ್ತಾರೆ, ಅವರು ನಿಸ್ತೇಜ

ರಾಗದಂತೆ ನೀತಿಯುತವಾಗಿ ಶಿಸ್ತುಬದ್ಧವಾಗಿ ಸರ್ಕಾರದ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನು ಷ್ಠಾನಕ್ಕೆ ತರುವುದಕ್ಕೆ ಬೇಕಾಗುವಂತ ಬಲವನ್ನು ನಾವು ಕೊಡಬೇಕೆಂಬ ದೃಷ್ಟಿಯಿಂದ ಸೆಕ್ಷನ್ ಳಿನ್ನು ಹಾಕಿದ್ದೇವೆ. ಸೆಕ್ಷನ್ ಳಿರಲ್ಲಿ ತಪ್ಪಿತಸ್ಥರನ್ನು ರಕ್ಷಣೆ ಮಾಡುವಂಥ ಕವಚ ಇಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಸದಸ್ಯರಾದಂಥ ತಕ್ಕೇದ್ದಾರವರು ಕಾಲುವೇ ಅಂಚಿನಲ್ಲಿರ ತಕ್ಕ ಜಮೀನುದಾರರನ್ನು, ಕಾಲುವೆಯ ವ್ಯವಸ್ಥೆಯನ್ನು ಮತ್ತು ರಸ್ತೆಗಳ ವ್ಯವಹಾರವನ್ನು ಸುರಕ್ಷಿತವಾಗಿ ನೋಡಿಕೊಳ್ಳುವ ವಿಷಯದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಕಮಾಂಡ್ ಏರಿಯಾ ಮಾಡಿರುವುಥ ಉದ್ದೇಶ ಆ ಭಾಗದಲ್ಲಿ ಬರುವಂಥ ಪ್ರತಿಯೊಬ್ಬ ರೈತರಿಗೂ ನೀರಿನ ಉಪಯೋಗ ಮಾಡುವುದೇ ಆಗಿದೆ. ಅನೇಕ ರೀತಿಯ ಆರ್ಥಿಕ ಕಾರ್ಯಕ್ರಮಗಳನ್ನು ಆ ಪ್ರದೆ ಶದಲ್ಲಿ ಮಾಡಿ, ಆ ಭಾಗದ ಪ್ರತಿಯೊಬ್ಬರಿಗೂ ಸಮಾನವಾದುಥ ನ್ಯಾಯವನ್ನು ನಾವು ದೊರಕಿಸಬೇಕಾಗಿದೆ. ಆ ದೃಷ್ಟಿಯಿಂದಲೇ ಕಮಾಂಡ್ ಏರಿಯಾ ವನ್ನು ಸೃಷ್ಟಿಸಿದ್ದೇವೆ. ಒಂದು ಸಂತೋಷದ ಅಂಶವೇನೆಂದರೆ, ಈ ಮಸೂದೆ ಕರ್ನಾಟಕ ರಾಜ್ಯದ ಆರ್ಥಿಕ ರೂಪರೇಷೆಯನ್ನು ಬದಲಾವಣೆ ಮಾಡತಕ್ಕ, ಕ್ರಾಂತಿದಾಯಕವಾದ, ಹೊಸ ಆರ್ಥಿಕ ಯುಗವನ್ನು ಸೃಷ್ಟಿ ಸುವಂಥ ಒಂದು ಮಸೂದೆಯಾಗಿದೆ, ಎರಡೂ ಕಡೆಯ ಮಾನ್ಯ ಸದಸ್ಯರೆಲ್ಲರೂ ಈ ಮಸೂದೆಗೆ ಒಮ್ಮತದ ನುಂಜೂರಾತಿಯನ್ನು ಕೊಡಬೇಕೆಂದು ಅಧ್ಯಕ್ಷರ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. CHAIRMAN. —The question is :

"That the Karnataka Command Area Development Bill, 1980 be taken into consideration."

The motion was adopted.

Clause by clause Consideration of the Bill.

CLAUSES 2 TO 51

MR .CHAIRMAN : The question is :

"That clauses 2 to 51 both inclusive, do stand part of the Bill."

The motion was adopted.

(Clauses 2 to 51 were added to the Bill)

CLAUSES 1, ETC.

MR. CHAIRMAN.—The question is :

"The Clause 1, the Long Tittle, the Preamble and the Enacting Formula, do stand part of the Bill."

The motion was adopted.

Clauses 1, the Long Title, the Preamble and the Enacting Formula were added to the Bill.

Motion to pass

SRI M. VEERARPA MOILY (Minister for Finance and Co-operation).—Sir, I move—

"That the Karnataka Command Area Development Bill, 1980, be passed."

MR .CHAIRMAN.—The question is :

"That the Karnataka Command Area Development Bill, 1980, be passed."

The Motion was adopted and the Bill was passed.

THE KARNATAKA SALES TAX (AMENDMENT) BILL, 1980.

Motion to Consider

SRI M. VEERAPPA MOILY (Minister for Finance and Co-operation).—Sir, I move—

"That the Karnataka Sales Tax (Amendment) Bill, 1980, be taken into consideration."

The question was proposed.

ಶ್ರೀ ಎಂ. ವೀರಪ್ಪ ಮೊಯ್ಲಿ (ಹಣಕಾಸಿನ ಮಂತ್ರಿಗಳು). – ಮಾನ್ಯ ಅಧ್ಯಕ್ಷರೇ, ಇದು ಬಹಳ ಸರಳವಾದಂಥ ಮಸೂದೆ. Shrimps, Prawns ಹಾಗೂ Lobsters ಮೇಲೆ ಪರ್ಚೇಸ್ ಟ್ಯಾಕ್ಸ್ ಹಾಕಿದ್ದೆವು. ಈ ಟ್ಯಾಕ್ಸನ್ನು ರೆಟ್ರಾಸ್ಪೆಕ್ಟೀವ್ ಆಗಿ ಫಸ್ಟ್ ಸೆಪ್ಟೆಂಬರ್ ೧೯೭೮ರಿಂದ ಹಾಕಿದ್ದಕ್ಕೆ ತಿದ್ದುಪಡಿಯನ್ನು ಸೂಚಿಸಿ, ಸೀನೇ ಷೆಡ್ಯೂಲ್‌ನಲ್ಲಿ ಫಸ್ಟ್ ಏಪ್ರಿಲ್ ೧೯೭೮ರಿಂದ Shrimps, Prawns, ಹಾಗೂ Lobsters ಮೀನುಗಳ ಮೇಲೆ ಪರ್ಚೇಸ್ ಟ್ಯಾಕ್ಸ್ ಹಾಕಿದ್ದೆವು. ಆದರ ಪ್ರಕಾರ ವಸೂಲು ಮಾಡುವುದಕ್ಕೆ ಹೋದಾಗ ಸಂಬಂಧಪಟ್ಟ ಉದ್ಯಮಿಗಳು ಅವರ ಒಂದು ಪ್ರಾಜೆಕ್ಟ್ ರಿಪೋರ್ಟ್ ಪ್ರಕಾರ ಸೇಲ್ಸ್ ಟ್ಯಾಕ್ಸ್ ಮತ್ತು ಪರ್ಚೇಸ್ ಟ್ಯಾಕ್ಸ್ ಸೇರಿಸದೇ ಅವರ ವ್ಯವಹಾರ ಮಾಡಿಕೊಳ್ಳುತ್ತಿದ್ದರು. ಇದರಿಂದ ಏನು ಪರಿಣಾಮವಾಯಿತು ಅಂದರೆ ಅನೇಕ ಉದ್ಯಮಗಳನ್ನು ನಡೆಸಲಿಕ್ಕೆ ಆತಂಕವಾಗಿ, ಕೈಗಾರಿಕೆಗಳು ನಿಂತುಹೋಗುವ ಸಂಭವ ಇದು ಬಹಳ ತೊಂದರೆ ಕೂಡ ಆಯಿತು. ಕೇರಳ ರಾಜ್ಯದ ಉದ್ಯಮಿಗಳು ಹೆಚ್ಚು ಸ್ಪರ್ಧೆಗೆ ಬಂದಾಗ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕೂಡ ತೊಂದರೆಯಾಗುತ್ತದೆ. ಇಡೀ ಕೈಗಾರಿಕೆಯನ್ನೇ ಮುಂದು ವರಿಸುವುದಕ್ಕಾಗುವುದಿಲ್ಲವೆಂದು ಮನವಿ ಬಂದ ಮೇಲೆ ರೆಟ್ರಾಸ್ಪೆಕ್ಟೀವ್ ಎಫ್‌ಕ್ಟೀವ್ ತೆಗೆದು, ಈ ಮಸೂದೆಯನ್ನು ತಂದ ತಾರೀಖಿನಿಂದ ಇದನ್ನು ಜಾರಿ ಮಾಡುವಂತೆ ಮಾಡಿದೆ. ಮೀನಿನ ಉದ್ಯಮದ ದೃಷ್ಟಿಯಿಂದ ಮತ್ತು ಟ್ಯಾಕ್ಸೇಷನ್ ಪಾಲಿಸಿ ಕೂಡ ರೆಟ್ರಾಸ್ಪೆಕ್ಟೀವ್‌ನಿಂದ ಟ್ಯಾಕ್ಸ್ ಹಾಕಿ ಆರ್ಥಿಕ ಬಲೋದ್ಪಂದನ ಹಾಕಿ ಉದ್ಯಮಿಗಳು ಉಸಿರು ಕಟ್ಟದಂತೆ ಮಾಡುವ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ೨ನೇ ವಿಚಾರ ಗ್ಲಾಸ್ ಬಾಟ್ಲಿಂಗ್ ೮ ಪರ್ಸೆಂಟಿನಿಂದ ೬ ಪರ್ಸೆಂಟಿಗೆ ಇಳಿಸಿದ್ದೇವೆ. ಇದು ಕೂಡ ನಮ್ಮಲ್ಲಿ ಒಂದೇ ಒಂದು ಕೈಗಾರಿಕೆ ಇದೆ : ಕೇರಳ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಇವೆ. ಅಲ್ಲಿ ೬ ಪರ್ಸೆಂಟ್ ಇದೆ, ನಾವು ೮ ಪರ್ಸೆಂಟ್ ಹಾಕಿದ್ದೆವು. ಇದರಿಂದಲೂ ಕೂಡ ಕೈಗಾರಿಕೆಗಳು ಬೆಳೆಯುವುದಕ್ಕೆ ತೊಂದರೆಯಿದ್ದುದರಿಂದ ೮ ಪರ್ಸೆಂಟ್ ಇದ್ದುದನ್ನು ೬ ಪರ್ಸೆಂಟಿಗೆ ಇಳಿಸುವಂಥ ತಿದ್ದುಪಡಿ ಕೂಡ ತಂದಿದ್ದೇವೆ. ಈ ಮಸೂದೆಗೂ ಕೂಡ ಈ ಮನೆಯ ಎರಡೂ ಕಡೆಯ ಸದಸ್ಯರುಗಳು ಮಂಜೂರಾತಿ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಈ ಒಂದು ಗ್ಲಾಸ್ ಇಂಡಸ್ಟ್ರಿ ಬಿದ್ದು ಹೋಗುತ್ತದೆ ಎಂದು ಈಗ ೮ ಪರ್‌ಸೆಂಟ್ ಇದ್ದುದನ್ನು ೬ ಪರ್‌ಸೆಂಟ್‌ಗೆ ಇಳಿಸಲು ಈ ಒಂದು ಬಿಲ್ಲನ್ನು ತಂದಿದ್ದೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಅವರು ಬಹಳ ಆಲೋಚನೆ ಮಾಡಿ ನೋಡ ಬೇಕಾಗಿದೆ. ಈ ಗ್ಲಾಸ್ ಇಂಡಸ್ಟ್ರಿ ಉದ್ಯಮದಿಂದ ಎಷ್ಟು ಜನ ಜೀವನ ಮಾಡುತ್ತಿದ್ದಾರೆ, ಎಷ್ಟು ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಂ. ಇದಕ್ಕಾಗಿಯೇ ಒಂದು ಮಸೂದೆ ತರತಕ್ಕ ಅವಶ್ಯಕತೆ ಇರಲಿಲ್ಲ ಅಂತ ನನಗೆ ಅನ್ನಿಸುತ್ತಿದೆ. ಇಪ್ಪತ್ತು ಖಾದಿ ಗ್ರಾಮೋದ್ಯೋಗದಲ್ಲಿ ತಯಾರಾಗತಕ್ಕ ವಸ್ತುಗಳ ಮೇಲೆ ನಾಲ್ಕು ಪರ್‌ಸೆಂಟ್ ಸೇಲ್ಸ್‌ಟ್ಯಾಕ್